ಆ) ಕರ್ನಾಟಕ ನಗರ ಪ್ರದೇಶ ಅನಧಿಕೃತ ಕಟ್ಟಡಗಳ ಸಕ್ರಮಗೊಳಿಸುವ ಕಾಯ್ದೆಯೊಂದನ್ನು 1991ರಲ್ಲಿ ಜಾರಿಗೆ ತಂದಿದೆ. ಈ ಬಗ್ಗೆ ನಿಯಮಗಳನ್ನು ರೂಪಿಸುವ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ.

ಆ) ಮೇಲೆ ನಮೂದಿಸಿದ ಕಾಯ್ದೆಯನ್ವಯ ರೂಪಿಸಲಾಗುವ ನಿಯಮಗಳನ್ನು ಜಾರಿಗೊಳಿಸಿದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕೇಂದ್ರ ಮತ್ತು ಹುಡ್ಕೋ ಸಂಸ್ಥೆಯಿಂದ ವಸತಿ ಕಾರ್ಯಕ್ಕೆ ಬಿಡುಗಡೆಯಾದ ಹಣ

1164 (1685): ಶ್ರೀ ಕೆ. ಹರ್ಷಕುಮಾರ್ (ಚಾಮರಾಜ):–

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದಿಂದ ಅಥವಾ ಹುಡ್ಕೋ ಮತ್ತಿತರ ಸಂಸ್ಥೆಗಳಿಂದ ರಾಜ್ಯದ ವಸತಿ ಕಾರ್ಯಕ್ರಮಗಳಿಗಾಗಿ ಬಿಡುಗಡೆಯಾದ ಹಣವೆಷ್ಟು ?

ಆ) ರಾಜ್ಯಸರ್ಕಾರ ಆ ಹಣವನ್ನು ಷಡೆದು ಕೊಳ್ಳುವಲ್ಲಿ ಮಾಡಿರುವ ಪ್ರಯತ್ನವೇನು ?

ಶ್ರೀ ಗೋಪಿನಾಥ ಆರ್. ಸಾಂಡ್ರ (ವಸತಿ ಸಚಿವರು):–

ಅ) ಕೇಂದ್ರ ಸರ್ಕಾರದಿಂದ ನೆಹರು ರೋಜ್‌ಗಾರ್ ಯೋಜನೆಗೆ ಸಹಾಯ ಧನವಾಗಿ ರೂ. 137.170 ಲಕ್ಷ ರೂ.ಗಳನ್ನು ಪಡೆಯಲಾಗಿದೆ. ಹುಡ್ಕೋ ಮತ್ತಿತ್ತರ ಹಣಕಾಸು ಸಂಸ್ಥೆಗಳಿಂದ ವಸತಿ ಯೋಜನೆಗೆ ರೂ. 21610.026 ಲಕ್ಷಗಳನ್ನು ಪಡೆಯಲಾಗಿದೆ.

ಆ) ಗ್ರಾಮೀಣ ವಸತಿ ಕಾರ್ಯಕ್ರಮಕ್ಕೆ ಹುಡ್ಕೋ ಸಾಲದ ಹಂಚಿಕೆಯನ್ನು ಹೆಚ್ಚು ಮಾಡಲು ಕೇಂದ್ರಕ್ಕೆ ವಿನಂತಿಸಿದೆ.

ಅಧ್ಯಕ್ಷರು:– ಪ್ರಶ್ನೋತ್ತರ ವೇಳೆ ಮುಗಿಯಿತು

ಅರ್ಜಿಗಳನ್ನು ಒಪ್ಪಿಸುವುದು

ಶ್ರೀಮತಿ ಸುಮಾ ವಸಂತ:– ಮಾನ್ಯ ಅಧ್ಯಕ್ಷರೇ, ಕೊಡಗಿನ ಕೊತ್ತೂರು ಹಳ್ಳಿಯಲ್ಲಿ ಆದ ಪೋಲೀಸ್ ಗೋಲಿಬಾರ್ ಬಗ್ಗೆ ವರದಿ ನೀಡಿರುವ ಬಗ್ಗೆ ಹಾಗೂ ದುಷ್ಕರ್ಮಿಗಳು ಪತಿ, ಪತ್ನಿ ಹಾಗೂ ಮಕ್ಕಳನ್ನು ಬೆಂಕಿ ಹಚ್ಚಿ ಕೊಲೆ ಮಾಡಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ರಾಜ್ಯದಲ್ಲಿ ಪರವಾನಗಿ ಇಲ್ಲದೆ ಸ್ಥಾಪಿಸಲ್ಪಟ್ಟ ಶಾಲೆಗಳು

† ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ತಾವು ಅಪ್ಪಣೆ ಕೊಟ್ಟಿರುವ ಪ್ರಕಾರವಾಗಿ ಇವತ್ತು ಒಂದು ಮುಖ್ಯವಾದ ವಿಚಾರವನ್ನು ಮಾನ್ಯ ಶಿಕ್ಷಣ ಸಚಿವರ ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ಪ್ರಜಾವಾಣಿ ಪತ್ರಿಕೆಯ ಮುಖಪುಟದಲ್ಲಿ ಇದರ ವರದಿ ಸಹಿತ ಆಗಿದೆ. ಈ ಮಾನ್ಯತೆ ಪಡೆಯದೆ ಇರತಕ್ಕಂಥ ಪ್ರಾಥಮಿಕ ಶಾಲೆಗಳು ಸುಮಾರು 600 ಶಾಲೆಗಳು ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಇರುವುದು ನಮಗೆಲ್ಲಾ ತಿಳಿದಿರತಕ್ಕ ವಿಚಾರ. ಪ್ರತಿ ಶಾಲೆಯಲ್ಲೂ ಮಾನ್ಯತೆ ಪಡೆಯದೆ 7ನೇ ತರಗತಿಯವರೆಗೂ ಸಹಿತ ಅವರೆಲ್ಲ ಓದಿದ್ದಾರೆ. ಸುಮಾರು 30 ಸಾವಿರ ಜನ ಮಕ್ಕಳು ಇಡೀ ರಾಜ್ಯದಲ್ಲಿ ಇದ್ದಾರೆ. ಶಿಕ್ಷಣ ಇಲಾಖೆಯವರು ಕಳೆದ ಹತ್ತು ವರ್ಷಗಳಿಂದ ಇವರಿಗೆಲ್ಲ ಏನು ಮಾಡಿಕೊಂಡು ಬಂದಿದ್ದಾರೆ ಎಂದರೆ, ಪರ್ಮಿಷನ್ ತೆಗೆದುಕೊಳ್ಳದೇ ಇರತಕ್ಕಂಥ

ಶಾಲೆಗಳಲ್ಲಿ ಓದಿರತಕ್ಕಂಥ ಮಕ್ಕಳಿಗೆ ಪರೀಕ್ಷೆಗಳಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶವನ್ನು ಬೇರೆ ಸ್ಕೂಲುಗಳ ಮುಖಾಂತರ ಕೊಟ್ಟುಕೊಂಡು ಬಂದಿದ್ದಾರೆ.

ಈಗ ಅಂಥವರು 30,000 ಮಕ್ಕಳಿದ್ದಾರೆ, ಸೋಮವಾರದಿಂದ ಅವರಿಗೆಲ್ಲ ಏಳನೇ ಕ್ಲಾಸ್ ಪರೀಕ್ಷೆಗಳು ಪ್ರಾರಂಭವಾಗುತ್ತವೆ. ಇವತ್ತು ಶುಕ್ರವಾರ. ನೀವು ಇನ್ನೂ ಸಹಿತ ಪರ್ಮಿಷನ್ ಕೊಟ್ಟಿಲ್ಲ. ಪರ್ಮಿಷನ್ ಅವರಿಗೆ ಕೊಡುವುದಾದಲ್ಲಿ ಅವರು ಅರೇಂಜ್‌ಮೆಂಟ್ಸ್‌ನ್ನು ಹೇಗೆ ಒಂದು ದಿವಸದಲ್ಲಿ ಮಾಡಿಕೊಳ್ಳುತ್ತಾರೆ ಎನ್ನುವುದರ ಬಗ್ಗೆ ತಾವು ವಿಚಾರ ಮಾಡಬೇಕು. ಇದು ಏನಾಗಿದೆ, ಎರಡು ವರ್ಷದಿಂದ ಈ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾಡಿರತಕ್ಕಂಥ ತಪ್ಪು. 1ನೇ ಕ್ಲಾಸ್ ಅಥವಾ 2ನೇ ಕ್ಲಾಸ್‌ನಲ್ಲಿ ಈ ಶಾಲೆಗಳು ಪ್ರಾರಂಭವಾದ ತಕ್ಷಣ ನೀವು ಏನು ಬ್ಯಾನ್ ಮಾಡುತ್ತೇವೆ ಎಂದು ಗೌರ್ನಮೆಂಟ್ ಸರ್ಕ್ಯುಲರ್‌ಗಳನ್ನು ಹೊರಡಿಸುತ್ತೀರಾ ? ಏತಕ್ಕೆ ಅವರಿಗೆ ಸೇರಿಸಿಕೊಳ್ಳುವುದಕ್ಕೆ ಪರ್ಮಿಷನನ್ನು ಕೊಡಬೇಕು ? ಬೇಕಾದಷ್ಟು ಕಾನೂನುಗಳು ಇವೆ. ಕಾನೂನು ಪ್ರಕಾರವಾಗಿ ಅವರನ್ನು ದಸ್ತಗಿರಿ ಮಾಡಿ, ಈ ಖಾಸಗಿ ಶಿಕ್ಷಣ ಶಾಲೆಗಳನ್ನು ನಡೆಸತಕ್ಕಂಥವರಿಗೆ ಆ ಮಕ್ಕಳ ಬಾಳನ್ನು ಏತಕ್ಕೆ ಹಾಳು ಮಾಡುವುದಕ್ಕೆ ನೀವು ಅವಕಾಶ ಮಾಡಿಕೊಡುತ್ತಿದ್ದೀರಿ. ಮಾನ್ಯ ಮಂತ್ರಿಗಳೇ, ಇದು ತಮ್ಮ ಗಮನಕ್ಕೂ ಬರುವುದಿಲ್ಲ. ನಾವು ಮಂತ್ರಿಗಳಿದ್ದಾಗ ನಮ್ಮ ಗಮನಕ್ಕೂ ಸಹಿತ ಇದು ಬರುತ್ತಿರಲಿಲ್ಲ. ಅನೇಕ ಮಟ್ಟಗಳಲ್ಲಿ ಅಧಿಕಾರಿಗಳೇ ಶಾಮೀಲಾಗಿ ಈ ಶಾಲೆಗಳನ್ನು ಬೇರೆಯವರ ಹೆಸರಿನಲ್ಲಿ ನಡೆಸತಕ್ಕಂಥ ಉದಾಹರಣೆಗಳು ಸಾವಿರಾರು ಇವೆ. ಇವೊತ್ತು 30 ಸಾವಿರ ಮಕ್ಕಳು ಏನು ಮಾಡಬೇಕು ? ನಾಳೆ ಸೋಮವಾರ ಅವರಿಗೆ ಪರೀಕ್ಷೆ ಇದೆ. ಅವರ ಮೇಲೆ ಎಷ್ಟೊಂದು ಟೆನ್ಷನ್ ಆಗುತ್ತದೆ ಎನ್ನುವುದನ್ನು ವಿಚಾರ ಮಾಡಿ. ಅದೇ ರೀತಿಯಲ್ಲಿ ಪರ್ಮಿಷನ್ ಇಲ್ಲದೆ ಅನೇಕ ಹೈಸ್ಕೂಲುಗಳು ಪ್ರಾರಂಭವಾಗಿವೆ. ತಾವು ರಾಜಕೀಯ ಕಾರಣಕ್ಕೋಸ್ಕರ ಜಿಲ್ಲಾ ಪರಿಷತ್ತಿನವರು ಪ್ರಾರಂಭ ಮಾಡಿರತಕ್ಕಂಥ ಅನೇಕ ಪ್ರೈವೇಟ್ ಹೈಸ್ಕೂಲ್‌ಗಳಿಗೆ ಇನ್ನು ಪರ್ಮಿಷನ್ ಕೊಟ್ಟಿಲ್ಲ, ಅವರಿಗೂ ಸಹಿತ ಎಸ್.ಎಸ್.ಎಲ್.ಸಿ.ಯಲ್ಲಿ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಯಾವ ಕಾರಣದಿಂದ ಇನ್ನು ತಾವು ಅವಕಾಶ ಕೊಟ್ಟಿಲ್ಲ. ನೀವು ಗುಲ್ಬರ್ಗ ಯೂನಿವರ್ಸಿಟಿಯಲ್ಲಿ ಇಲ್ಲೀಗಲ್ ಆಗಿ ಅಡ್ಮಿಷನ್ ತೆಗೆದುಕೊಂಡ 30ಜನ ಎಂ.ಬಿ.ಬಿ.ಎಸ್. ಹುಡುಗರಿಗೆ ಇಲ್ಲಿಂದ ಟೆಲಿಫೋನ್ ಮಾಡಿ ವೈಸ್ ಛಾನ್ಸಲರ್ ಕಡೆಯಿಂದ ಬೆಳಿಗ್ಗೆ ಪರೀಕ್ಷೆಗೆ ಕುಳಿತುಕೊಳ್ಳಿ ಎಂದು ಪರ್ಮಿಷನ್ ಕೊಡಿಸಿದ್ದೀರಿ. 30 ಸಾವಿರ ಜನರು ಬಡ ಮಕ್ಕಳಿಗೆ ಏತಕ್ಕೆ ನೀವು ಪರ್ಮಿಷನ್ ಕೊಟ್ಟಿಲ್ಲ. ಏತಕ್ಕೆ ಎಂದು ನಾನು ಕೇಳುತ್ತೇನೆ. ಈ ಧೋರಣೆ ಏತಕ್ಕೆ ನಿಮಗೆ ? ಎಸ್.ಎಸ್.ಎಲ್.ಸಿ. ಪರೀಕ್ಷೆ ನಾಳೆಯಿಂದ ಪ್ರಾರಂಭವಾಗುತ್ತದೆ. ಆ ಮಕ್ಕಳು ಏನು ಮಾಡಬೇಕು ? ನಿಮ್ಮ ಶಿಕ್ಷಣ ಇಲಾಖೆ ಏನು ಮಾಡುತ್ತಿದೆ ? ಇನ್ನು ಎರಡು ದಿವಸ ಪರೀಕ್ಷೆ ಇಟ್ಟುಕೊಂಡು ನಾಳೆ, ನಾಡಿದ್ದು ರಜ ಇದೆ, ಯಾವ ತರಹ ಅವರು ಅಕಾಮಡೇಷನ್ ಅರೇಂಜ್‌ಮೆಂಟ್ ಮಾಡುತ್ತಾರೆ ? ಇದರ ಬಗ್ಗೆ ಸರ್ಕಾರದ ಧೋರಣೆ ಏನು ಎನ್ನುವುದನ್ನು ನಮಗೆ ತಿಳಿಸಬೇಕು. ಶೈಕ್ಷಣಿಕ ವರ್ಷ ಪ್ರಾರಂಭವಾದಂಥ ಸಂದರ್ಭದಲ್ಲಿ ನಾನು ಇವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಯಾವ ಯಾವ ರೀತಿ ಇಲ್ಲೀಗಲ್ ಆಗಿ ಇಂಥ ಶಾಲೆಗಳು ಪ್ರಾರಂಭವಾಗುತ್ತವೆ, ಅವುಗಳನ್ನೆಲ್ಲಾ ಕಂಪ್ಲೀಟ್ ಆಗಿ ಸ್ಟಾಪ್ ಮಾಡಿ. ಅದು ನಿಮ್ಮ ಕೈಯಲ್ಲಿ ಆಗುವುದಿಲ್ಲ, ಬಿಟ್ಟು ಬಿಡುತ್ತೀರಿ. ಪ್ರತಿವರ್ಷ ಈ ರೀತಿ ಪರ್ಮಿಷನ್ ಕೊಟ್ಟುಕೊಂಡು ಬಂದಿದ್ದೀರಿ. ಅಧಿಕಾರಿಗಳು ಶಾಮೀಲಾಗಿದ್ದಾರೆ. ನಾನು ಹೇಳುತ್ತಿರುವುದು ಕೆಳಮಟ್ಟದಲ್ಲಿ. ಅಧಿಕಾರಿಗಳೇ ಶಾಮೀಲಾಗಿದ್ದಾರೆ. ಅದರಿಂದಾಗಿ ಇದರ ಬಗ್ಗೆ ಸರ್ಕಾರದ ಧೋರಣೆ ಏನು. ಈಗಂತೂ ಆಗಿಹೋಗಿದೆ. ಅವರಿಗೆ ಪರೀಕ್ಷೆಗೆ ಕುಳಿತುಕೊಳ್ಳಲಿಕ್ಕೆ ಅವಕಾಶ ಕೊಡಲೇಬೇಕು. ಇದರ ಬಗ್ಗೆ ಚೌಕಾಸಿ ಮಾಡತಕ್ಕಂಥ ಅವಶ್ಯಕತೆ ಇಲ್ಲ. 7ನೇ ಕ್ಲಾಸಿಗೂ ಕೊಡಿ. ಪ್ರೌಢಶಾಲೆಯವರಿಗೂ ಕೊಡಿ. ನಿಮ್ಮ ಹತ್ತಿರ ಶಕ್ತಿ ಇದ್ದರೆ ಜೂನ್‌ನಲ್ಲಿ ಈ ಶಿಕ್ಷಣ ಸಂಸ್ಥೆಗಳು ಏನು ಪರ್ಮಿಷನ್ ಇಲ್ಲದೆ ನಾಯಿ ಕೊಡೆಗಳಂತೆ ಏನು ಶಾಲೆಗಳು

ಬಳುತ್ತವೆ. ಆ ಕೊಡೆಗಳನ್ನು ನಿರ್ಮೂಲನ ಮಾಡಕ್ಕಂಥ ಶಕ್ತಿಯನ್ನು ನೀವು ತೋರಿಸುತ್ತೇವೆಂದು ಹೇಳಿ. ತಾವು ಅವಕಾಶ ಕೊಟ್ಟಿದ್ದಕ್ಕೆ ತುಂಬ ಧನ್ಯವಾದಗಳು.

ಅಧ್ಯಕ್ಷರು:– ಅವರು ಪ್ರಸ್ತಾಪನೆ ಮಾಡಿದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್:– ಸಾರ್ ಅವರು ಮಾಡಿಬಿಟ್ಟರೆ ಇದು ಆಗಿ ಹೋಯಿತು ಎಂತಲೇ ?

ಅಧ್ಯಕ್ಷರು:– ಅಲ್ಲ, ಅವರು ಬರೆದು ಕಳುಹಿಸಿ ಪರ್ಮಿಷನ್ ತೆಗೆದುಕೊಂಡು ಪ್ರಸ್ತಾವನೆ ಮಾಡಲಿಕ್ಕೆ ಕೇಳಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವು 15 ದಿವಸ ಜೀರೋ ಅವರ್‌ನಲ್ಲಿ ಏನೂ ಪ್ರಸ್ತಾಪ ಮಾಡಬಾರದು ಎಂದು ಹೇಳಿದಿರಿ. ನಾವು ಪರ್ಮಿಷನ್ ಕೇಳಲಿಕ್ಕೆ ಬರಲಿಲ್ಲ. ನೀವು ಕೊಡುವುದಿಲ್ಲವೆಂದು ಹೇಳಿದಿರಿ.

ಶ್ರೀ ವಾಟಾಳ್ ನಾಗರಾಜ್:– ನೀವು ಕೊಡಲ್ಲ ಎಂದಿರಿ ಅದಕ್ಕೆ ಕೇಳಲಿಲ್ಲ. ಇದು ಪ್ರಾಮುಖ್ಯತೆ ಪಡೆದಿರತಕ್ಕಂಥ ವಿಚಾರ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಅದಕ್ಕೆ ನಾವು ನಿಮ್ಮ ಕೊಠಡಿಗೆ ಬರಲಿಲ್ಲ. ಬೇಡ ಅಂದರೆ ನಾವು ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು:– ಪ್ರಸ್ತಾಪ ಬಹಳ ಪ್ರಾಮುಖ್ಯವಾಗಿದೆ. ನಾನು ಪೇಪರ್‌ನಲ್ಲಿ ಓದಿದೆ, ಮಕ್ಕಳಿಗೆ ತೊಂದರೆಯಾಗುತ್ತದೆ ಎಂದು.....

ಶ್ರೀ ಬಿ.ಎಸ್. ಯಡಿಯೂರಪ್ಪ:– ಬಿ.ಜೆ.ಪಿ.ಯವರು ಕೈಕಟ್ಟಿಕೊಂಡು ಕುಳಿತಿದ್ದರು, ಬೇರೆ ಪಕ್ಷದವರು ಕೈಕಟ್ಟಿ ಕುಳಿತಿದ್ದರು ಎಂದಿದೆ. ಜನಕ್ಕೆ ಏನು ಉತ್ತರ ಕೊಡೋಣ ಇಂತ ಪ್ರಮುಖವಾದ ವಿಷಯ ಬಂದಾಗ

ಅಧ್ಯಕ್ಷರು:– ಹೌದು, ಅವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಇದು ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ ಎಂದಾಗ, ಇದರಲ್ಲಿ ಎಲ್ಲರೂ ಧ್ವನಿಗೂಡಿಸಬೇಕಾಗುತ್ತದೆ. ಇದರಲ್ಲಿ ಮಡಿವಂತಿಕೆ ಏನು ಇದೆ ?

ಅಧ್ಯಕ್ಷರು:– ಮಡಿವಂತಿಕೆ ಪ್ರಶ್ನೆ ಇಲ್ಲ. ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಎರಡು ನಿಮಿಷದಲ್ಲಿ ಮಾತನಾಡಿ. ಸಮಯ ಬಹಳ ಕಡಿಮೆ ಇದೆ. ಇವತ್ತು ಜೀರೋ ಅವರ್ ಇಲ್ಲದಿದ್ದರೂ ಇದಕ್ಕೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀವಾಟಾಳ್ ನಾಗರಾಜ್:– ಸ್ವಾಮಿ ಅಕ್ರಮ ಶಾಲೆಗಳನ್ನು ಸಕ್ರಮ ಮಾಡತಕ್ಕ ನಿರ್ಧಾರಕ್ಕೂ ಸರ್ಕಾರ ಬಂದಿಲ್ಲ. ಅಥವಾ ಅಕ್ರಮ ಶಾಲೆಗಳು ಪ್ರಾರಂಭವಾಗುವುದಕ್ಕೆ ಸರ್ಕಾರವೇ ಶಾಮೀಲಾಗಿದೆ. ಈ ಬಗ್ಗೆ ಏನಾದರೂ ಒಂದು ನಿಯಂತ್ರಣ ಮಾಡಬೇಕು ಇಲ್ಲ ಅವುಗಳನ್ನು ಸಂಪೂರ್ಣವಾಗಿ ಸಕ್ರಮ ಮಾಡಬೇಕು. ಈಗ ಇಲ್ಲಿ 30 ಸಾವಿರ ವಿದ್ಯಾರ್ಥಿಗಳು ಇದ್ದಾರೆ. ಇನ್ನು ಎರಡು ದಿವಸ ಉಳಿದಿದೆ. ಅವರ ಭವಿಷ್ಯದ ಪ್ರಶ್ನೆ ನಿರರ್ಥಕವಾಗುತ್ತದೆ. ಸರ್ಕಾರ ಕೂಡಲೇ ಒಂದು ವ್ಯವಸ್ಥೆ ಮಾಡಬೇಕು. ಇದು ಅಲ್ಲದೆ ಪ್ರೌಢಶಾಲೆಗಳಲ್ಲೂ ಸದಾ ಈ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಮೊದಲಿನಿಂದಲೂ ಈ ಸದನದಲ್ಲಿ ಅಕ್ರಮವಾದಂತ ಶಾಲೆಗಳನ್ನು ರದ್ದು ಮಾಡುವುದರ ಬಗ್ಗೆ ಸರ್ಕಾರವನ್ನು ಒತ್ತಾಯಿಸಿದ್ದೇವೆ. ತೀವ್ರವಾದ ಕ್ರಮ ಕೈಗೊಳ್ಳುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಶಿಕ್ಷಣ ಸಚಿವರಾಗಿದ್ದಾಗ ಅನೇಕ ಸಾರಿ ಭರವಸೆ ನೀಡಿದ್ದಾರೆ. ಈ ಭರವಸೆ ಇನ್ನೂ ಈಡೇರಿಲ್ಲ.

ನಾಯಿಕೊಡೆಗಳಂತೆ ಈ ಇಂಗ್ಲೀಷ್ ಮಾಧ್ಯಮಶಾಲೆಗಳಂತು ರಸ್ತೆ ರಸ್ತೆಯಲ್ಲಿ, ಬೀದಿ ಬೀದಿಯಲ್ಲಿ ಬರುತ್ತಿವೆ. ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಿದರೂ, ಅದರ ಬಗ್ಗೆ ಕ್ರಮ ಇಲ್ಲ. ವಿದ್ಯಾರ್ಥಿಗಳು ಸಕ್ರಮವಾದಂಥ ಶಾಲೆಗಳಿಗೆ ಸೇರಬೇಕೆ, ಅಕ್ರಮವಾದ ಶಾಲೆಗಳಿಗೆ ಸೇರಬೇಕೆ, ಇದು ಬಹಳ ಶೋಚನೀಯವಾದ ಪರಿಸ್ಥಿತಿ. ಆದ್ದರಿಂದ ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರ ಕೂಡಲೇ ಈ ಗೊಂದಲಮಯ ಪರಿಸ್ಥಿತಿಯನ್ನು ಸರಿಪಡಿಸಬೇಕು. ಮಕ್ಕಳಿಗೆ ಅನುಕೂಲವಾಗಬೇಕು, ಅವರ ಭವಿಷ್ಯ ಉದ್ಧಾರವಾಗುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಅಕ್ರಮ ಶಾಲೆ, ಸಕ್ರಮ ಶಾಲೆ ಪ್ರಶ್ನೆ ಅಲ್ಲ ನಮ್ಮ ಮಕ್ಕಳು ಶಾಲೆಯಲ್ಲಿ ಓದುತ್ತಿದ್ದಾರೆ, ಅಲ್ಲಿ ಓದುವುದಕ್ಕೆ ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ನಾವು ಲೈಸನ್ಸ್ ಇದೆಯೋ ಪರ್ಮಿಟ್ ಇದೆಯೋ ? ಎಂದು ಮಕ್ಕಳನ್ನು ಸೇರಿಸಲಿಕ್ಕೆ ಹೋಗಲಿಲ್ಲ. ಅಡ್ಮಿಷನ್‌ಗೆ ಅವಕಾಶ ಕೊಟ್ಟಿದ್ದೀರ. ನಾಡಿದ್ದು ಪರೀಕ್ಷೆ ಇದೆ. ಸ್ವಾಮಿ ನ್ಯಾಯವಾಗಿ ಇಂಥ ವಿಚಾರಗಳು ಈ ಸದನದಲ್ಲಿ ಪ್ರಸ್ತಾಪ ಆಗಬಾರದು. ಇದು ಸರ್ಕಾರದ ಎಜುಕೇಷನ್ ಮಿನಿಷ್ಟರ್ ಮತ್ತು ಇಲಾಖೆಯ ಕರ್ತವ್ಯ. ಆದುದರಿಂದ ಈ ಪರೀಕ್ಷೆಗೆ ವ್ಯವಸ್ಥೆ ಮಾಡಬೇಕು. ಶನಿವಾರ, ಭಾನುವಾರ ರಜಾ ಇದೆ ನಾಳೆ ಸೆಂಟರ್ ತೋರಿಸಿದರೆ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹುಡುಕಿಕೊಂಡು ಹೋಗುವುದು ಹೇಗೆ ? ಸರ್ಕಾರ ನಿಜಕ್ಕೂ ಇಷ್ಟೊಂದು ಅಲಸ್ಯ ತೋರಿಸಬಾರದು. ದಯವಿಟ್ಟು ತಕ್ಷಣವೇ ಸೂಚನೆಗಳನ್ನು ಕೊಟ್ಟು ಈಗ ಓದುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ. ಈಗಾಗಲೇ ಇವರು ಪರೀಕ್ಷೆಗೆ ದುಡ್ಡು ಕಟ್ಟಿದ್ದಾರೆ, ನೀವು ಪುಕ್ಕಟೆ ಪರೀಕ್ಷೆಗೆ ಕೂರಿಸುತ್ತಿಲ್ಲ. ಆ ಮಕ್ಕಳಿಗೆ ವಿಶೇಷ ದೂತರಿಂದ ಸೆಂಟರ್ ಯಾವುದು ಎಂದು ಪ್ರತಿಯೊಂದು ಶಾಲೆಗೆ ತಿಳಿಸುವ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಸರ್ಕಾರದ ನಿರ್ಣಯ ಏನು ಎಂದು ಕೇಳುತ್ತಿದ್ದೇನೆ.

ಡಾ. ಹೆಚ್.ಡಿ. ಲಮಾಣಿ:– ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವಾರು ವರ್ಷಗಳಿಂದ ಈ ಪರಿಸ್ಥಿತಿ ಹಾಗೇ ನಡೆಯುತ್ತಾ ಬರುತ್ತಿದೆ. ಈ ಅಕ್ರಮ ಶಾಲೆಗಳು ಹಾಗೆಯೇ ನಡೆಯುತ್ತಿವೆ. ಅವುಗಳಿಗೆ ಸರ್ಕಾರದಿಂದ ಇನ್ನೂ ಯಾವುದೇ ಮಾನ್ಯತೆ ಸಿಕ್ಕಿಲ್ಲ. ಆದರೆ ಆ ಶಾಲೆಗಳಲ್ಲಿ ವಿದ್ಯಾರ್ಥಿಗಳು ಸೇರಿಕೊಳ್ಳುತ್ತಲೇ ಹೋಗುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದು ನಮ್ಮ ಸರ್ಕಾರ ಮೇ ತಿಂಗಳಲ್ಲಿ ಒಂದು ಸುಗ್ರೀವಾಜ್ಞೆ ಹೊರಡಿಸಿತ್ತು. ಯಾರು ಇಂತಹ ಅಕ್ರಮ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಪ್ರವೇಶ ಮಾಡಿಸಬಾರದು ಮತ್ತು ಈ ಸಂಸ್ಥೆಗಳಿಗೆ ಹೈಸ್ಕೂಲ್‌ಗಳಿಗೆ, ಪ್ರೈಮರಿ ಶಾಲೆಗಳಿಗೆ ಮಾನ್ಯತೆ ಇಲ್ಲದಿರುವ ಶಾಲೆಗಳಿಗೆ ಸಹಿತ ತಾವು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬಾರದು ಎಂದು ಒಂದು ಸುಗ್ರೀವಾಜ್ಞೆ ಮಾಡಿದ್ದೇವೆ. ಈ ಸುಗ್ರೀವಾಜ್ಞೆ ಆದ ನಂತರ ಫೆಬ್ರವರಿಯಲ್ಲಿ ಆಕ್ಟ್ ಸಹಿತ ಆಯಿತು. ಒಂದನೇ ಸಲ ಸುಗ್ರೀವಾಜ್ಞೆಯಾಯಿತು. ಎರಡನೇ ಸಲ ಸುಗ್ರೀವಾಜ್ಞೆ ಆಯಿತು ಮತ್ತು ಮುಂದೆ ಇದು ಕಾನೂನು ಸಹಿತ ಆಯಿತು. ಆದರೆ ಇಂತಹ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಆಗಲೇ ಸೇರಿಸಿ ಆಗಿತ್ತು.

ಇಂಗ್ಲೀಷ್ ಮೀಡಿಯಮ್ ಆಗಲಿ ಕನ್ನಡ ಮೀಡಿಯಮ್ ಆಗಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡಾಗಿತ್ತು. ಈಗ ಅವರ ಭವಿಷ್ಯದ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಅದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಬೇಕಾದ ಪ್ರಸಂಗ ಬಂತು. ನಮಗೂ ಪೋಷಕರಿಂದ ಹಾಗೂ ಶಾಸಕರಿಂದ ಬಹಳ ಒತ್ತಾಯ ಬಂತು. ಅದರ ಬಗ್ಗೆ ಈಗಾಗಲೇ ಒಂದು ಕ್ರಮ ಕೈಗೊಂಡಿದ್ದೇವೆ. ಅವರಿಗೆ ಪರೀಕ್ಷೆಗೆ ಕೂಡಲಿಕ್ಕೆ ಅವಕಾಶವನ್ನು ನಾವು ಮಾಡಿಕೊಟ್ಟಿದ್ದೇವೆ. ಆ ಆಜ್ಞೆ ಈಗಾಗಲೇ ಹೋಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಯಾವಾಗ ಕಳುಹಿಸಿಕೊಟ್ಟಿದ್ದೀರಿ ?

ಡಾ: ಹೆಚ್.ಡಿ. ಲಮಾಣಿ:– ನಿನ್ನೆ ಹೋಗಿದೆ. ಆಜ್ಞೆ ಎಲ್ಲಾ ಕಡೆಗೂ ಟೆಲೆಕ್ಸ್ ಮುಖಾಂತರ ಕಳುಹಿಸಿಕೊಡಲಾಗಿದೆ. ಅವರಿಗೆ ಪರೀಕ್ಷೆಗೆ ಕೂಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಎಸ್.ಎಸ್.ಎಲ್.ಸಿ. ಮತ್ತು 7ನೇ ಕ್ಲಾಸಿಗೆ ಪರ್ಮಿಷನ್ ಕೊಟ್ಟಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಎಸ್.ಎಸ್.ಎಲ್.ಸಿ.ಗೆ ಏನು ಮಾಡಿದ್ದೀರಿ ?

ಡಾ: ಹೆಚ್.ಡಿ. ಲಮಾಣಿ:– ಪರ್ಮಿಷನ್ ಕೊಟ್ಟಿದ್ದೇವೆ. ಎಲ್ಲಾ ಸದಸ್ಯರಲ್ಲಿ ನಾನು ಹೇಳುವುದು ಏನೆಂದರೆ ಮುಂದಿನ ವರ್ಷದಿಂದ ಇವುಗಳನ್ನು ಗಂಭೀರವಾಗಿ ಪರಿಗಣಿಸಿ ಮರ್ಜಿಲೆಸ್ ಆಗಿ ಟ್ರೀಟ್ ಮಾಡುತ್ತೇವೆ. ಈ ಬಗ್ಗೆ ಕ್ರಮ ಹಾಕಿಕೊಳ್ಳುತ್ತೇವೆ. ಟಿ.ಸಿ.ಹೆಚ್. ಪಿ.ಯು.ಸಿ.. ಬಗ್ಗೆ ಯಾವುದೇ ನಿರ್ಣಯ ಕೈಗೊಂಡಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ನಿರ್ಣಯ ಸರ್ಕಾರ ತೆಗೆದುಕೊಳ್ಳುವುದಕ್ಕೆ ನಾವೇನು ಮಾಡಬೇಕು. ಸ್ಟಿಕ್ಟ್ ಆಗಿ ಪಾಲನೆ ಮಾಡಿ ಕ್ರಮ ತೆಗೆದುಕೊಳ್ಳಿ.

ಡಾ: ಹೆಚ್.ಡಿ. ಲಮಾಣಿ:– ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:– ನೀವು ಪರ್ಮೀಷನ್ ಕೊಟ್ಟ ಮೇಲೆ ಏನಾಗುತ್ತದೆ ? ಎಲ್ಲರೂ ಇದೇ ರೀತಿ ಮಾಡುತ್ತಾರೆ. ಬಿ.ಎಡ್‌ನಲ್ಲಿ ಏನಾಯಿತು ಎಂಬುದು ಗೊತ್ತಿಲ್ಲವೆ ?

ಶ್ರೀ ಜೆ.ಸಿ. ಮಾಧುಸ್ವಾಮಿ:– ಮೆಡಿಕಲ್ ಕೋರ್ಸಿಗೆ ಕೊಟ್ಟ ಮೇಲೆ ಇದನ್ನು ಉಳಿಸಿಕೊಂಡು ಏನು ಮಾಡುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ:– ಬಿ.ಎಡ್.ಗೆ ಕೊಡುವುದಿಲ್ಲ ಎಂದು ಹೇಳಿದ್ದೀರಿ. ಅವರು ಸೇರಿಸಿಕೊಂಡಿದ್ದಾರೆ. ಈಗ ಪರೀಕ್ಷೆ ಬಂತು ಏನು ಮಾಡುತ್ತೀರಿ ? ನಿರ್ದಿಷ್ಟವಾದ ತೀರ್ಮಾನವನ್ನು ಮಾಡದೇ ಹೋದರೆ ಇದಕ್ಕೆ ಏನೂ ಅರ್ಥ ಇಲ್ಲ.

ಡಾ: ಹೆಚ್.ಡಿ. ಲಮಾಣಿ:– ಈಗ ನಿರ್ದಿಷ್ಟವಾದ ತೀರ್ಮಾನವನ್ನು ಮಾಡಿದ್ದೇವೆ. ಮುಂದಿನ ವರ್ಷದಿಂದ ಅದು ಯಾವುದು ಆಗದ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಎಂ. ಮುನಿಸ್ವಾಮಿ:– ಈ ತರಹ ನಾಲ್ಕು ವರ್ಷಗಳಿಂದ ಹೇಳಿಕೊಂಡು ಬಂದಿದ್ದೀರಿ.

ಡಾ: ಹೆಚ್.ಡಿ. ಲಮಾಣಿ:– ಇಷ್ಟು ದಿವಸ ಕಾನೂನು ಇರಲಿಲ್ಲ. ಈಗ ನಾವು ಕಾನೂನು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ:– ಕಾನೂನು ಜಾರಿಗೆ ಬಂದಿದೆ ಎಂದು ಹೇಳುತ್ತಾರೆ. ಆದರೆ ಯಾರನ್ನೂ ಪ್ರಾಸಿಕ್ಯೂಟ್ ಮಾಡಿಲ್ಲ.

ಡಾ: ಹೆಚ್.ಡಿ. ಲಮಾಣಿ:– ನಮ್ಮ ಕಡೆಯಲ್ಲಿ ಪಟ್ಟಿ ಇವೆ. ಎಲ್ಲಾ ತಯಾರು ಮಾಡಿಕೊಂಡಿದ್ದೇವೆ. ಫೆಬ್ರುವರಿನಲ್ಲಿ ಕಾನೂನು ಆಗಿದೆ, ಕೆಲವೊಂದು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆ್ಯಕ್ಷನ್ ತೆಗೆದುಕೊಳ್ಳುವವರು ಯಾರು ? ಅವರನ್ನು ಜೈಲಿಗೆ ಕಳುಹಿಸಬೇಕು. ಶಾಲೆ ಮಾಡಿಕೊಂಡರೆ ಕೇಳುವವರೂ ಇಲ್ಲ, ಹೇಳುವವರೂ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಇದರಲ್ಲಿ ಸರ್ಕಾರದ ಜವಾಬ್ದಾರಿಯೂ ಇದೆ. ನಾವು ನಿಮಗೆ ಬಿಲ್ಲು ಪಾಸು ಮಾಡಿಕೊಟ್ಟಿದ್ದೇವೆ. ಆ ವೇಳೆಯಲ್ಲಿ ಅಡ್ಮಿಷನ್ ಮುಗಿದುಹೋಗಿತ್ತು. ಯಾವ ಸಮಯದಲ್ಲಿ ಅಡ್ಮಿಷನ್ ಇತ್ತು ಆಗ ಈ ಕಾನೂನು ಇರಲಿಲ್ಲ. ಈಗ ನೀವು ನಿರ್ಣಯ ಮಾಡಿದ್ದೀರಿ ಸಂತೋಷ. ಇನ್ನು ಮುಂದೆ ಇದು ಆಗಬಾರದು. ನೀವು ಸ್ಟಿಕ್ಟ್ ಆಗಿ ಇದನ್ನು ಎನ್‌ಫೋರ್ಸ್ ಮಾಡಬೇಕು. ಡಿಸಿಪ್ಲೀನ್ ನಿಮ್ಮ ಶಿಕ್ಷಣ ರಂಗದಲ್ಲಿ ಎಲ್ಲಾ ಹೋಗಿಬಿಟ್ಟಿದೆ. ನಿಮ್ಮ ಶಿಕ್ಷಣ ರಂಗದಲ್ಲಿ ಇವೊತ್ತು ಡಿಸಿಪ್ಲೀನ್ ಉಳಿದಿಲ್ಲ. ಶಿಕ್ಷಣ ಇಂಪ್ರೂವ್ ಆಗಬೇಕಾದರೆ ನೀವು ಬಹಳ ಸ್ಟಿಕ್ಟ್ ಆಗಿ ಕಾನೂನನ್ನು ಮಾಡಬೇಕು. ಕೇವಲ ಕಾನೂನು ಮಾಡುವುದು ಅಷ್ಟೇ ಅಲ್ಲ, ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಸೋ ಮೋಟೋ ಆ್ಯಕ್ಷನ್ ತೆಗೆದುಕೊಳ್ಳಿ. ಪ್ರೈವೇಟ್‌ನವರು ಎಲ್ಲಿ ಅಕ್ರಮವಾಗಿ ಶುರು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಡಾ: ಹೆಚ್.ಡಿ. ಲಮಾಣಿ:– ಮುಂದಿನ ವರ್ಷ ಇಂಥ ಪ್ರಸಂಗ ಈ ಅಸೆಂಬ್ಲಿಯಲ್ಲಿ ಮಾತ್ರವೇ ಅಲ್ಲ ಬೇರೆ ಎಲ್ಲೂ ಚರ್ಚೆಗೆ ಬರಲು ಸಾಧ್ಯ ಇಲ್ಲ. ಮುಂದಿನ ವರ್ಷ ಸೂಕ್ತ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈಗಾಗಲೇ ನಾವು ಅಧಿಕಾರಿಗಳಿಗೆ ಸೂಕ್ತವಾಗಿ ನಿರ್ದೇಶನ ಕೊಟ್ಟು ಮುಂದಿನ ವರ್ಷದಿಂದ ಯಾವುದೇ ಹೈಸ್ಕೂಲ್ ಇರಲಿ, ಶಾಲೆ ಇರಲಿ ಮಾನ್ಯತೆ ಕೊಡುವ ಹಾಗಿದ್ದರೆ ಮಾನ್ಯತೆ ಕೊಡಬೇಕು. ಇಲ್ಲದಿದ್ದರೆ ಯಾವುದೇ ಮರ್ಸಿ ಇಲ್ಲದೆ ಅವುಗಳನ್ನು ಬಂದ್ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ನಾಲ್ಕು ಜನರನ್ನು ಜೈಲಿಗೆ ಕಳುಹಿಸಿ. ಆಗ ಎಲ್ಲಾ ಸರಿ ಹೋಗುತ್ತದೆ.

ಡಾ: ಹೆಚ್.ಡಿ. ಲಮಾಣಿ:– ಅದು ಒಮ್ಮೆಲೇ ಮಾಡುವುದು ಅಲ್ಲ. ಮಾಡುತ್ತೇವೆ.

ನಿಯಮ 68

ರಾಜ್ಯದ ರೈತರ ಸಾಲ ಮತ್ತು ಬಡ್ಡಿ ಮನ್ನ

† ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಹೋದರೆ ಇದರಲ್ಲಿ ಏನು ಚರ್ಚೆ ಮಾಡುವುದು ? ತಾವು ಇರಬೇಕು ಎಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ನಿನ್ನೆ ತಾವು ಇರಲಿಲ್ಲ ಎಂದು ಹೇಳಿ ಸ್ವಲ್ಪ ಮುಂದೆ ಹಾಕಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಇಲ್ಲಿಯೇ ಇರುತ್ತೇನೆ. ಈ ಸಬ್ಜೆಕ್ಟ್ ವಿಚಾರದಲ್ಲಿ ನಾನೊಂದು ಸಣ್ಣ ಮೀಟಿಂಗ್‌ನ್ನು ಕರೆದಿದ್ದೇನೆ.

ಶ್ರೀ ಬೈರೇಗೌಡ:– ಮಾನ್ಯ ಮುಖ್ಯಮಂತ್ರಿಗಳೇನಾದರೂ ಆಶ್ವಾಸನೆ ಕೊಡುವುದಾದರೆ ನಮಗೆ ಈ ಚರ್ಚೆಯೇ ಬೇಕಾಗಿಲ್ಲ. ನೇರವಾಗಿ ಹೇಳಿಬಿಡಿ. ನಮಗೆ ಏನು ಇದರ ಬಗ್ಗೆ ಮಾತನಾಡಿ ಇದರಿಂದ ಪ್ರಚಾರ ತೆಗೆದುಕೊಳ್ಳಬೇಕು ಎಂದಾಗಲಿ ಅಥವಾ ನಮಗೆ ಕ್ರೆಡಿಟ್ ತೆಗೆದುಕೊಳ್ಳಬೇಕೆಂದಾಗಲಿ ಆಸೆ ಇಲ್ಲ. ಇರತಕ್ಕಂಥ ಪರಿಸ್ಥಿತಿ ವಾಸ್ತವಾಂಶ ಗೊತ್ತಿದೆ. ದಯವಿಟ್ಟು ಏನಾದರೂ ಹೇಳುವುದು ಇದ್ದರೆ ಹೇಳಿಬಿಟ್ಟರೆ ಸದನದ ಸಮಯ ಉಳಿಯುತ್ತದೆ. ಆ ರೀತಿ ಏನಾದರೂ ಹೇಳಿಕೆ ಮಾಡುವ ಹಾಗೆ ಇದ್ದರೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ:– ನಿರ್ಣಯ ತೆಗೆದುಕೊಂಡಿದ್ದೇವೆ ಎಂದು ಹೇಳಿದರೆ ಸಂತೋಷ. ನಿಮಗೆ ನಿರ್ಣಯ ತೆಗದುಕೊಳ್ಳುವುದಕ್ಕೆ ಟೈಮ್ ಬೇಕಾದರೆ ನಾನು ಮಾತನಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ರೈತರು ನಿಮಗೆ ಚಿರಋಣಿಗಳಾಗಿರುತ್ತಾರೆ. ಅವರಿಗೆ ಹೊಸತನ ಕೊಟ್ಟಂತೆ ಆಗುತ್ತದೆ. ಹೇಳಿ ನೀವು. ಚರ್ಚೆ ಮಾಡಬೇಕು ಎಂದು ನಮಗೇನೂ ಆಸೆ ಇಲ್ಲ.